# ಗುರುಕೃಪೆ

ಗುರು, ಗುರುತ್ವ, ಗುರುತತ್ವ ಎಂಬಂಥ ಮಾತುಗಳನ್ನು ನಾವು ಬಳಸುತ್ತಿರುತ್ತೇವೆ. 'ಗುರುಸ್ತುತಿ'ಯಂತೂ ಲೋಕ ಪ್ರಸಿದ್ಧ. ಜ್ಞಾನಕ್ಕೂ ಕರ್ಮಕ್ಕೂ ಸಂಬಂಧ ಉಂಟು. ಗುರುವು ಜ್ಞಾನದ ಪ್ರಮಾಣ. ಗುರು ಎಲ್ಲಿರುತ್ತಾನೆ? ಭೌತಿಕವಾಗಿ ಕಾಣುವ ಗುರು ಮಾತ್ರ ಗುರುವೆಂದು ಲೋಕ ಭಾವಿಸುತ್ತಿದೆ. ಆದರೆ, ಅದು ಅರ್ಧಸತ್ಯದ ನೆಲೆ. ಗುರು ಒಂದು ಸಂಕೇತ. ಅದೊಂದು ರೂಪಕವೂ ಹೌದು; ಪ್ರತಿಮೆಯೂ ಹೌದು. ನಾವು ನೋಡುವ ಮರ, ನಮ್ಮ ಪಕ್ಕದಲ್ಲಿರುವ ಪ್ರಾಣಿ, ಉಸಿರಾಡುವ ಗಾಳಿ, ಕೇಳುವ ಶಬ್ದ, ಮೂಸುವ ಗಂಧಇವೆಲ್ಲವೂ ಗುರುವಿನ ಆಂಶಿಕ ಸ್ವರೂಪಗಳೇ. ಜ್ಞಾನಕ್ಕೆ ಅನಂತ ಮುಖವುಂಟು. ನಿಜ ಜ್ಞಾನಕ್ಕೆ ಮುಖ ಅನಂತವೇ. ಇದು ಜ್ಞಾನದ ಒಂದು ಮುಖ ಅನ್ನುವುದು ಅದರ ಒಂದು ಭಾಗದ ನೋಟ. ಗುರುವೂ ಅಷ್ಟೇ. ನಮಗೆ ಅಕ್ಷರ ಕಲಿಸಿದವನು ಗುರು. ವಿಜ್ಞಾನವನ್ನು ಹೇಳಿಕೊಟ್ಟವನು ಅಧ್ಯಾಪಕ. ಗಣಿತದಲ್ಲಿ ಪರಿಣತಿ ತಂದುಕೊಟ್ಟವನು ಪ್ರಾಧ್ಯಾಪಕ. ಇವೆಲ್ಲ ಗುರುಶಕ್ತಿಯ ಏಕದೇಶೀಯ ಅಭಿವ್ಯಕ್ತಿ ಎನ್ನುವುದನ್ನು ನಾವು ತಿಳಿಯಬೇಕು. ಇವೆಲ್ಲಕ್ಕಿಂತ ಮೀರಿದ್ದು ಗುರುತತ್ವ. ಇವನು ಅತ್ಯತಿಷ್ಠದ್ದಶಾಂಗುಲ. ತಿಳಿದವನು 'ಭೂಮ'ನಾಗುತ್ತಾನೆ. ಆ ತತ್ವ ತಿಳಿಯಲಿಕ್ಕಾಗದವನು 'ಅಲ್ಪ'ನಾಗಿಯೇ ಇರುತ್ತಾನೆ. ನಾವು ಗುರುವನ್ನು ಹುಡುಕಿದರೂ ಸಿಗುವುದಿಲ್ಲ. ಆದರೆ, ಗುರು ನಮ್ಮನ್ನು ಹುಡುಕುತ್ತಿರುತ್ತಾನೆ. ಸಿಕ್ಕವರಿಗೆ ಗುರು ಸಿಗುತ್ತಾನೆ. ಅವನು ಕಂಡವರಿಗೆ ಮಾತ್ರ ಲಭ್ಯ. ಶಿಷ್ಯ ಗುರುವಿನಿಂದ ಭೌಗೋಳಿಕವಾಗಿ ದೂರ ಇರಬಹುದು. ಆದರೆ, ಸರ್ವವ್ಯಾಪಿಯಾದ ಗುರುವಿಗೆ ದೂರ ಎನ್ನುವುದೇ ಇಲ್ಲ. ಅದಕ್ಕಾಗಿ ಗುರು ಕಾಲದೇಶವನ್ನು ಮೀರಿದ ವ್ಯಾಪನಶೀಲ ಜಾಗೃತಶಕ್ತಿಯೆಂದು ತಿಳಿದವರು ಹೇಳುತ್ತಾರೆ. ಆದರೆ, ನಾವು ತಿಳಿಯಬೇಕು ಅಷ್ಟೆ. ಬಂಗಾಲದಲ್ಲಿ ಬಲು ಹೆಸರು ಮಾಡಿದ ದೊಡ್ಡ ವ್ಯಕ್ತಿಯೊಬ್ಬ ಇದ್ದ. ಆತನ ಹೆಸರು ಸತೀಶಚಂದ್ರ ಮುಖ್ಯೋಪಾಧ್ಯಾಯ. ಈತನದು ವರ್ಣಮಯ ಬದುಕು. ಅವನು ಕ್ರಾಂತಿಕಾರರಲ್ಲಿ ಅಗ್ರಗಣ್ಯ. ಅವನ ನಾಲಗೆ ತರ್ಕಕ್ಕಿಂತ ಹರಿತವಾದದ್ದು. ದೇವರ ಬಗೆಗೆ ಸಂಶಯ. ಇನ್ನು ಧರ್ಮದ ಬಗೆಗೊ ಕಠಿನ ಸ್ವಭಾವ. ಇಂಥ ವ್ಯಕ್ತಿಯ ಬದುಕಿನ ಒಂದು ಪುಟ 'ಗುರುಮುಖ'ವನ್ನು ನಮಗೆ ಪರಿಚಯಿಸುತ್ತದೆ. ನೀವು ಆತನ ಮಾತಿನಲ್ಲೇ ಎಲ್ಲವನ್ನು ಕೇಳಿ. 'ನಾನು ಒಂದು ದಿನ ಮನೆಯಲ್ಲಿ ಓದುತ್ತ ಕುಳಿತಿದ್ದೆ. ನನ್ನ ಆಪ್ತ ಗೆಳೆಯ ವಿನಯ ರಂಜನ ಸರಕಾರ ಬಂದ. ಅವನಿಗೆ ನನ್ನ ಬಗೆಗೆ ತುಂಬಾ ಅಭಿಮಾನ. ಅವನ ಗುರುಗಳು ವಿಜಯಕೃಷ್ಣ ಗೋಸ್ವಾಮಿ. ವಿನಯರಂಜನ ಆಗಾಗ್ಗೆ ಗುರುವಿನ ಬಗೆಗೆ ಅಭಿಮಾನದಿಂದ ಪ್ರಸ್ತಾಪಿಸಿದ್ದುಂಟು. ಆದರೆ, ಭಕ್ತಿಭಾವದ ಬಗೆಗೆ ನಾನು ಅಷ್ಟು ಉದಾರವಾಗಿ ಇರಲಿಲ್ಲ. ಆದಿನ ನಮ್ಮ ಗುರುಗಳ ಹತ್ತಿರ ಹೋಗಿ ಕೇಳಿದೆ. ನಿಮ್ಮನ್ನು ಒಂದು ಸಲ ಕರೆದು ತರಲು ಹೇಳಿದ್ದಾರೆ. ಇಂದು ಹೋಗಿ ಬಿಡೋಣ' ಎಂದು ನನ್ನಲ್ಲಿ ಅವನು ಅಲವತ್ತುಕೊಂಡ. ನನ್ನ ಗೆಳೆಯನ ಪ್ರೀತಿಯಂತೂ ನಿರ್ವಾಜ್ಯವಾದದ್ದು. ನನಗೆ ಅವನ ಮಾತನ್ನು ಮೀರಲೂ ಆಗಲಿಲ್ಲ; ಬಿಡಲೂ ಆಗಲಿಲ್ಲ. 'ಇಂದು ಬೇಡ ನಾಳೆ ಹೋಗೋಣ' ಎಂದು ಹೇಳಿದೆ. ನನ್ನ ಮಾತು ಕೇಳಿದ ವಿನಯರಂಜನ ಹಿಗ್ಗಿಹೋದ. 'ನಾನು ನಾಳೆ ಬೆಳಿಗ್ಗೆ ಬಂದು ಬಿಡುತ್ತೇನೆ. ಮನೆಯಲ್ಲಿಯೇ ಇರಿ. ಗುರುಗಳಿಗೆ ನೀವು ಬರುವ ವಿಷಯ ತಿಳಿಸುತ್ತೇನೆ' ಎಂದು ಹೇಳಿ ಹೊರಟುಹೋದ.

ಆದರೆ, ಆ ಗುರುಗಳಲ್ಲಿ ಹೋಗಲು ನನಗೆ ಮನಸ್ಸಿರಲಿಲ್ಲ. ನನ್ನ ಮನಸ್ಸು ಅಂಥದ್ದನ್ನೆಲ್ಲಾ ಒಪ್ಪಿಕೊಳ್ಳುತ್ತಿರಲಿಲ್ಲ. ಈ ಸಂದರ್ಭದಿಂದ ಹೇಗಾದರೂ ತಪ್ಪಿಸಿಕೊಂಡರಾಯಿತೆಂದು ತೀರ್ಮಾನಿಸಿಕೊಂಡೆ. ಬೆಳಗಾಯಿತು. ವಿನಯರಂಜನನ ಮಾತು ನೆನಪಾಯಿತು. ಮನೆಯ ಬಾಗಿಲಿಗೆ ಬೀಗ ಹಾಕಿಕೊಂಡು ಹೊರಗೆ ಹೊರಟೆ. ದಾರಿಯಲ್ಲಿ ಬಹಳ ಹೊತ್ತಿನವರೆಗೆ ವಿನಯರಂಜನ ಸಿಗಲಿಲ್ಲ. ಸದ್ಯ ನಾನು ಪಾರಾದೆ ಎಂದುಕೊಂಡೆ. ಸೂರ್ಯ ನೆತ್ತಿಗೆ ಬಂದರೂ ಅಲೆಯುತ್ತಿದ್ದೆ. ಸುಡುಬಿಸಿಲು. ಆ ಬಿಸಿಲಿಗೆ ಬಾಯಾರಿತು. ಅಲೆದು ಅಲೆದು ಬಹಳ ದೂರ ಬಂದಿದ್ದೆ. ವಿನಯರಂಜನನ ಕೈಗೆ ಇನ್ನು ಸಿಗುವುದಿಲ್ಲ ಎಂದು ಮನಸ್ಸು ಹಗುರವಾಯಿತು. ಅಂತೂ ಒಂದು ಬಗೆಯ ಉಪದ್ರವ ಕಳೆದು ಹಗುರಾಯಿತು. ಆದರೆ, ಬಾಯಾರಿಕೆ ನನ್ನನ್ನು ಬಳಲಿಸಿತ್ತು. ನೀರು ಬೇಕೆಂದೆನಿಸಿತು. ಸಮೀಪದಲ್ಲಿಯೇ ಒಂದು ಸಾಮಾನ್ಯ ಮನೆಯೊಂದು ಕಾಣಿಸಿತು. ಆ ಮನೆಯ ಮುಂದೆ ಹುಡುಗನೊಬ್ಬ ಕುಳಿತಿದ್ದ. 'ಬಾಯಾರಿಕೆ ಆಗಿದೆ, ನೀರು ಕೊಡುತ್ತೀಯಾ?' ಆಗ ಹುಡುಗ 'ಒಳಗೆ ಬನ್ನಿ ನೀರು ಕೇಳಲಿಕ್ಕೆ ಬರುತ್ತೀರೆಂದು ಕಾಯುತ್ತಿದ್ದೆ' ಎಂದು ವಿನೀತನಾಗಿ ಅವನು ನುಡಿದ. ಅವನು ನನ್ನನ್ನು ಕರೆದೊಯ್ಯುವಾಗ ಅವನ ಹೆಸರು 'ಯೋಗ ಜೀವನ' ಎಂದು ತಿಳಿಯಿತು. ಆಗ ನಾನು 'ನಿಮ್ಮ ತಂದೆಯ ಹೆಸರೇನಪ್ಪ?' ಎಂದು ಕೇಳಿದೆ. 'ವಿಜಯ ಕೃಷ್ಣಗೋಸ್ವಾಮಿ' ಎಂದು ಹೇಳಿದ. ನನಗೋ ತಬ್ಬಿಬ್ಬು. ಬೆಳಗಿನಿಂದ ಅವರ ಮನೆಗೆ ಹೋಗಬಾರದೆಂದು ಮನಸ್ಸು ಮಾಡಿ ಹೊರಟಿದ್ದೆ. ಆದರೆ, ನೇರ ಬಂದದ್ದು ಅಲ್ಲಿಗೆ. ಅಷ್ಟರಲ್ಲಿ ಉಪ್ಪರಿಗೆ ಮೇಲಿದ್ದೆ. ವಿಜಯಕೃಷ್ಣ ಗೋಸ್ವಾಮಿ ಆಸನದಿಂದ ಬಂದು ಕೈಹಿಡಿದರು. ಅವರ ಶಾಂತ ಸುಸ್ನಿಗ್ಧ ಮುಖವನ್ನು ಕಂಡು ನಾನು ಹಿಗ್ಗಿದೆ. ಅವರು ಕೈಹಿಡಿದಾಗ ಒಂದು ಬಗೆಯ ರೋಮಾಂಚನವಾಯಿತು. ಒಂದು ಬಗೆಯ ಪಶ್ಚಾತ್ತಾಪ. ನಾನು ದೀನನಾಗಿ 'ಕ್ಷಮಿಸಿ ತಪ್ಪಾಯಿತು' ಎಂದೆ. 'ತನ್ನ ತಪ್ಪು ತನಗೆ ತಿಳಿಯುವುದು ಒಳ್ಳೆಯ ಕೆಲಸ' ಎಂದರು. ಅವರು ನನ್ನನ್ನು ಬೇರೆ ಕೋಣೆಗೆ ಕರೆತಂದು ಆಸನದಲ್ಲಿ ಕೂರಿಸಿದರು. 'ನಾನು ನಿನಗಾಗಿ ಕಾಯುತ್ತಿದ್ದೆ. ಇದು ನಿನಗೆ ದೀಕ್ಷಾ ಸಮಯ. ದೀಕ್ಷಾವಿಧಿ ಪೂರೈಸಬೇಕು' ಎಂದು ಹೇಳಿದರು. ನನ್ನಲ್ಲಿದ್ದ ಸಂಶಯಗಳು ಹೊರಟು ಹೋದುವು. ನಾನು ಶುದ್ಧನಾಗಿದ್ದೆ. ಅವರು ನನಗೆ ದೀಕ್ಷೆ ನೀಡಿದರು. ಶಕ್ತಿಪಾತ ಆಯಿತು. ನಾನು ಮನದುಂಬಿ ನಿಂತೆ. ಮೈದುಂಬಿದಂತೆ ಎದ್ದು ಅವರ ಪಾದಗಳಲ್ಲಿ ಮುಖವಿಟ್ಟೆ.

ಇದು ಒಬ್ಬನ ಬದುಕಿನಲ್ಲಿ ಗುರು ಪ್ರವೇಶಿಸಿದ ರೀತಿ. ಕುವೆಂಪು 'ಗುರುಕೃಪೆ' ಹೇಗೆ ಬರುವುದೊ ತಿಳಿಯದೆಂದು ಹೇಳುತ್ತಾರೆ! ನಮ್ಮ ಸುತ್ತಮುತ್ತ ಅಂಥವರು ಇದ್ದಾರೆ. ಆದರೆ, ನಾವು ಅದಕ್ಕೆ ಆಂತರಂಗಿಕವಾಗಿ ಸಿದ್ಧರಾಗಬೇಕು ಅಷ್ಟೇ! ಇದು 'ಗುರುಕೃಪೆ'ಯ ಒಂದು ಮಾದರಿ.

■ **ಪುರಂಜೀವಿ**

## ಮಾತೇ ಮುತ್ತು

- ಪ್ರಪಂಚ ಯಾವಾಗಲೂ ಥಳಕನ್ನು ಕಂಡು ಮೋಸ ಹೋಗುತ್ತದೆ.

  —ವಿಲಿಯಂ ಶೇಕ್ಸ್‌ಪಿಯರ್

- ಗಂಡಸು ತನಗೆ ತಿಳಿದಿರುವುದನ್ನು ಹೇಳುತ್ತಾನೆ; ಹೆಂಗಸು ತನಗೆ ಹಿತಕರವಾದುದನ್ನು ಹೇಳುತ್ತಾಳೆ.

  —ಜೆ.ಜೆ. ರೂಸೋ

- ಕಳೆದುಹೋದ ವಿಷಯಗಳಲ್ಲಿ ಚಿಂತಿಸಿ ಸಮಯವನ್ನು ಹಾಳು ಮಾಡಬೇಡಿ.

  —ಫ್ರಾನ್ಸಿಸ್ ಬೇಕನ್

- ಕೋಪವು ಸಿಂಹಾಸನವನ್ನು ಏರಿದಾಗ ಸತ್ಯ, ಧರ್ಮ ಮತ್ತು ತರ್ಕ ಹೊರಬಾಗಿಲನಲ್ಲಿ ನಿಂತಿರುತ್ತವೆ.

  —ಹೆನ್ರಿ

- ಸರ್ವವಿಧ ಕಾಮವನ್ನು ಮಾನವ ತೊರೆಯದ ಹೊರತು ಅವನಿಗೆ ರಾಮ ದರ್ಶನವಾಗುವುದಿಲ್ಲ. ರಾಮನ ದರ್ಶನ ಪಡೆದವನೇ ಪ್ರೇಮದ ಅಧಿಕಾರಿಯಾಗುತ್ತಾನೆ.

  —ಕಬೀರ್

- ದೇವರ ಚೆಲುವು, ದೊಡ್ಡಸ್ತಿಕೆ, ಗುಣಗಳು ನಮ್ಮ ನಮ್ಮ ಅನುಭವಗಳ ಮಿತಿಯನ್ನು ದಾಟಲಾರವು.

  —ಶಿವರಾಮ ಕಾರಂತ

- ತಪ್ಪು ಮಾಡುವುದು ಮನುಷ್ಯನ ಗುಣ; ಕ್ಷಮಿಸುವುದು ದೇವರ ಗು.

  —ಅಲೆಕ್ಸಾಂಡರ್ ಪೋಪ್

- ಬೇರೆ ಸಂಸ್ಕೃತಿಯನ್ನು ಪ್ರೀತಿಸು; ನಿನ್ನ ಸಂಸ್ಕೃತಿಯಲ್ಲಿ ಜೀವಿಸು.

  —ಮಹಾತ್ಮ ಗಾಂಧಿ